# ಕುವೆಂಪು ವಿಶ್ವವಿದ್ಯಾಲಯ

ಸಂಖ್ಯೆ:ಕುವಿ/ಪವಿ/ಡಿಎಸ್-3/ D5336 /2018-19

ಕುಲಸಚಿವ (ಪರೀಕ್ಷಾಂಗ) ರವರ ಕಛೇರಿ
ಜ್ಞಾನಸಹ್ಯಾದ್ರಿ, ಶಂಕರಘಟ್ಟ - 577451
ದೂ.ಸಂ. 08282-256166-257426
ದಿನಾಂಕ:06-10-2018

## ಸುತ್ತೋಲೆ

ವಿಷಯ: ಅಂಕ ಸುಧಾರಣೆಗಾಗಿ ಪರೀಕ್ಷೆ ಬರೆಯುವ ಕುರಿತು.

ಉಲ್ಲೇಖ: ಈ ಕಛೇರಿ ಸುತ್ತೋಲೆ ಸಂಖ್ಯೆ:ಕುವಿ/ದೂಶಿ/ಪವಿ/ಇಡಿಎಸ್-3/ಡಿ7049/ 2017-18 ದಿನಾಂಕ:15-12-2017

ವಿಷಯಕ್ಕೆ ಸಂಬಂಧಿಸಿದಂತೆ, ಡಿಸೆಂಬರ್-2017ರಲ್ಲಿ ಪರೀಕ್ಷೆ ಬರೆದಂತಹ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಅಂಕ ಸುಧಾರಣೆಗಾಗಿ ಮರು ಪರೀಕ್ಷೆ ತೆಗೆದುಕೊಳ್ಳಲು ನಿಯಮಾನುಸಾರ ಫಲಿತಾಂಶ ಪ್ರಕಟವಾದ ಮೂವತ್ತು (30) ದಿನಗಳೊಳಗಾಗಿ ಅರ್ಜಿ ಸಲ್ಲಿಸಲು ಉಲ್ಲೇಖಿತ ಸುತ್ತೋಲೆಯನ್ವಯ ಅವಕಾಶ ನೀಡಲಾಗಿತ್ತು

ಆದರೆ ವಿದ್ಯಾರ್ಥಿಗಳು ಮತ್ತು ಅಧ್ಯಯನ ಕೇಂದ್ರದವರಿಂದ ಹೆಚ್ಚಿನ ಸಂಖ್ಯೆಯಲ್ಲಿ ಮನವಿಗಳು ಬರುತ್ತಿದ್ದ ಕಾರಣ, ಇದೊಂದು ಬಾರಿ ವಿಶೇಷ ಸಂದರ್ಭವೆಂದು ಪರಿಗಣಿಸಿ ಅಂಕ ಸುಧಾರಣೆಗಾಗಿ ಅರ್ಜಿ ಸಲ್ಲಿಸಿ ಮರು ಪರೀಕ್ಷೆ ತೆಗೆದುಕೊಳ್ಳಲು ಅವಕಾಶ ನೀಡಲಾಗಿದೆ.

ಅಂಕ ಸುಧಾರಣೆಗಾಗಿ ಮರು ಪರೀಕ್ಷೆಗೆ ಅರ್ಜಿ ಸಲ್ಲಿಸುವಂತ ವಿದ್ಯಾರ್ಥಿಗಳು ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ - ಇವರ ಹೆಸರಿಗೆ ಪಾವತಿಯಾಗುವಂತೆ ಪರೀಕ್ಷಾ ಶುಲ್ಕವನ್ನು ಡಿ.ಡಿ. ಅಥವಾ ಎಫ್ ಅಂಡ್ ಆರ್ ಸಂಖ್ಯೆ:54023036246 ಈ ಖಾತೆಯ ಚಲನ್ ಮುಖಾಂತರ ಶುಲ್ಕ ಪಾವತಿಸಿ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ.

**ಪರೀಕ್ಷಾ ಶುಲ್ಕದ ವಿವರ**

| ಕ್ರಮ ಸಂಖ್ಯೆ | ಕೋರ್ಸ್‌ಗಳು | ಪರೀಕ್ಷಾ ಶುಲ್ಕ ರೂ.ಗಳಲ್ಲಿ | ವಿಶೇಷ ದಂಡ ಶುಲ್ಕ ರೂ.ಗಳಲ್ಲಿ | ಒಟ್ಟು ಶುಲ್ಕ ರೂ.ಗಳಲ್ಲಿ |
|---|---|---|---|---|
| 01 | ಎಂ.ಎ./ ಎಂ.ಕಾಂ. | 1030/- | 5880/- | 6910/- |
| 02 | ಎಂ.ಎಸ್ಸಿ ಗಣಿತ | 1210/- | 5880/ | 7090/- |
| 03 | ಎಂ.ಎಸ್ಸಿ.,/ಎಂ.ಎಲ್.ಐ.ಎಸ್ಸಿ., | 1450/- | 5880/ | 7330/- |
| 04 | ಎಂ.ಎ. ಶಿಕ್ಷಣ/ ಎಲ್‌ಎಲ್. ಎಂ. | 1815/- | 5880/ | 7695/- |

ಸದರಿ ವಿದ್ಯಾರ್ಥಿಗಳು ಶುಲ್ಕ ಪಾವತಿಯೊಂದಿಗೆ ಡಿಸೆಂಬರ್ - 2017ರ ಮೂಲ ಅಂಕಪಟ್ಟಿಯನ್ನು ಲಗತ್ತಿಸಿ ಕುಲಸಚಿವರು (ಪರೀಕ್ಷಾಂಗ), ಕುವೆಂಪು ವಿಶ್ವವಿದ್ಯಾಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ - 577 451 ಇವರಿಗೆ ಅರ್ಜಿಯನ್ನು ಕಳುಹಿಸಿಕೊಡುವುದು.

6/10/18

ಕುಲಸಚಿವ (ಪರೀಕ್ಷಾಂಗ)

ಕುಲಸಚಿವರು (ಪರೀಕ್ಷಾಂಗ)
ಕುವೆಂಪು ವಿಶ್ವವಿದ್ಯಾಲಯ
ಜ್ಞಾನ ಸಹ್ಯಾದ್ರಿ
ಶಂಕರಘಟ್ಟ- 577 451.

ಗೆ:

1) ನಿರ್ದೇಶಕರು, ದೂರ ಶಿಕ್ಷಣ ನಿರ್ದೇಶನಾಲಯ, ಕುವೆಂಪು ವಿಶ್ವವಿದ್ಯಾಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ
2) ಸಂಚಾಲಕರು, ಎಲ್ಲಾ ಅಧ್ಯಯನ ಕೇಂದ್ರಗಳು, ಕುವೆಂಪು ವಿಶ್ವವಿದ್ಯಾಲಯ